# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 224 |
| ಸದಸ್ಯರ ಹೆಸರು | : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 16.07.2019 |
| ಉತ್ತರಿಸುವ ಸಚಿವರು | : ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | 2018-19ರ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಎಷ್ಟು ಹಣ ಒದಗಿಸಲಾಗಿದೆ; | ಕೃಷ್ಣಾ ಭಾಗ್ಯ ಜಲ ನಿಗಮದಡಿ ಅನುಷ್ಠಾನಕ್ಕಾಗಿ ಕೈಗೊಂಡಿರುವ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ 2018-19ನೇ ಸಾಲಿನಲ್ಲಿ ಬಿಡುಗಡೆ ಮಾಡಿ ವೆಚ್ಚ ಮಾಡಲಾದ ಮೊತ್ತದ ವಿವರಗಳು ಈ ಕೆಳಗಿನಂತಿವೆ. |
| ಆ) | ಅವುಗಳಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಳಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | (see table below) |

| ಕ್ರಮ. ಸಂ | ಯೋಜನೆ ಹೆಸರು | 2018-19ನೇ ಸಾಲಿನಲ್ಲಿ ಬಿಡುಗಡೆ ಮಾಡಿ ಮಾಡಲಾದ ವೆಚ್ಚ (ರೂ. ಕೋಟಿಗಳಲ್ಲಿ) |
|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 (9 ಉಪ ಯೋಜನೆಗಳು ಹಾಗೂ ಭೂಸ್ವಾಧೀನ, ಪುನರ್‌ವಸತಿ & ಪುನರ್ ನಿರ್ಮಾಣ ಒಳಗೊಂಡಂತೆ) | 1078.70 |
| 2. | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2ರಡಿಯ ಮುಂದುವರೆದ ಕಾಮಗಾರಿಗಳ ವೆಚ್ಚ (ಭೂಸ್ವಾಧೀನ, ಪುನರ್‌ವಸತಿ & ಪುನರ್ ನಿರ್ಮಾಣ ಒಳಗೊಂಡಂತೆ) | 374.86 |
| | **ಒಟ್ಟು ಮೊತ್ತ** | **1453.56** |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | ಅವುಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಅವುಗಳ ಪ್ರಗತಿ ಯಾವ ಹಂತದಲ್ಲಿವೆ? (ಸಂಪೂರ್ಣ ವಿವರ ನೀಡುವುದು) | ಈಗಾಗಲೇ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-I & 2 ರಡಿಯ ಯೋಜನಾ ಕಾಮಗಾರಿಗಳು ಪೂರ್ಣಗೊಂಡಿದ್ದು ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಡಿ 6.19 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರದ ನೀರಾವರಿ ಸಾಮರ್ಥ್ಯ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸಲಾಗಿರುತ್ತದೆ. ಪ್ರಸ್ತುತ ಸದರಿ ಯೋಜನೆಯಡಿಯ ಕೆಲವು ಬಾಕಿ ಇರುವ ಕಾಮಗಾರಿಗಳು ಅಂತಿಮಗೊಳಿಸಲಾಗುತ್ತಿದೆ.<br>ಪ್ರಸ್ತುತ ಪ್ರಮುಖವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಹಂಚಿಕೆಯಾದ 130 ಟಿ.ಎಂ.ಸಿ. ನೀರಿನ ಬಳಕೆಗಾಗಿ 9 ಉಪ ಯೋಜನೆಗಳ ಅನುಷ್ಠಾನ ಕಾಮಗಾರಿಗಳು ಕೈಗೆತ್ತಿಕೊಂಡಿದ್ದು ಯೋಜನಾವಾರು ಕಾಮಗಾರಿಗಳ ಪ್ರಗತಿಯ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |

ಸಂಖ್ಯೆ: ಜಸಂಇ 37 ಡಬ್ಲ್ಯೂಬಿಎಂ 2019

(ಡಿ.ಕೆ.ಶಿವಕುಮಾರ)
ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

**ಅನುಬಂಧ**

## ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿಯ ಯೋಜನಾ ಕಾಮಗಾರಿಗಳ ಪ್ರಗತಿ ವಿವರಗಳು

### 1. ಕೃ.ಮೇ.ಯೋ. ಹಂತ-3ರಡಿ 9 ಉಪ- ಯೋಜನೆಗಳಡಿಯ ಕಾಮಗಾರಿಗಳ ಪ್ರಗತಿಯ ವಿವರಗಳು

| ಕ್ರ ಸ. | ಯೋಜನೆಯ ಹೆಸರು | ಯೋಜನಾ ಕಾಮಗಾರಿಯ ಭೌತಿಕ ಪ್ರಗತಿಯ ಪ್ರಸ್ತುತ ಹಂತ |
|---|---|---|
| 1 | ಮುಳವಾಡ ಏತ ನೀರಾವರಿ ಯೋಜನೆ ಹಂತ-3 | • ಬಳೂತಿ 1ನೇ ಮುಖ್ಯ ಸ್ಥಾವರ, ಹನುಮಾಪುರ 2ನೇ ಮುಖ್ಯ ಸ್ಥಾವರ, ಮಸೂತಿ 3ನೇ ಮುಖ್ಯ ಸ್ಥಾವರ ಮತ್ತು 4ನೇ 'ಎ' & 'ಬಿ' ಲಿಫ್ಟ್‌ನ ಟರ್ನ್ ಕೀ ಆಧಾರಿತ ಕಾಮಗಾರಿಗಳು ಪೂರ್ಣಗೊಂಡಿದ್ದು ಪ್ರಾಯೋಗಿಕ ಕಾರ್ಯಾರಂಭ ಮಾಡಲಾಗಿದೆ.<br>• ಯೋಜನೆ ಕಾಮಗಾರಿ ಅಡಿಯ ಲೀಡ್-ಆಫ್ ಕಾಲುವೆ, ಕಂಬೈಂಡ್ ಕಾಲುವೆ, ಬಿಜಾಪುರ ಮುಖ್ಯ ಕಾಲುವೆ ಕಿ.ಮೀ.0.00 ರಿಂದ 160.00 (ಪ್ರಾರಂಭಿಕ ರೀಚ್‌ನಲ್ಲಿ ರೈಲ್ವೆ ಕ್ರಾಸಿಂಗ್ ಹೊರತುಪಡಿಸಿ) ಪೂರ್ಣಗೊಂಡಿದ್ದು ಮುಖ್ಯ ಕಾಲುವೆ ಕಿ.ಮೀ.160.00 ದಿಂದ 193.00 ವರೆಗಿನ ಕಾಮಗಾರಿ ಪ್ರಗತಿಯಲ್ಲಿವೆ.<br>• ಮಲಘಾಣ ಮುಖ್ಯ ಕಾಲುವೆ ಕಿ.ಮೀ.0.00 ರಿಂದ 118.50 ರವರೆಗಿನ ಕಾಮಗಾರಿಗಳು ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.<br>• ಬಸವನ ಬಾಗೇವಾಡಿ, ಹೂವಿನ ಹಿಪ್ಪರಗಿ, ಬಬಲೇಶ್ವರ, ಮನಗೋಳಿ ತಿಡಗುಂದಿ & ಸಾಲವಾಡಗಿ ಶಾಖಾ ಕಾಲುವೆ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತವೆ ಮತ್ತು ಪೂರ್ಣಗೊಂಡ ಕಾಲುವೆ ಜಾಲಗಳಡಿ ಪ್ರಾಯೋಗಿಕವಾಗಿ ನೀರು ಹರಿಸಿ ಅಚ್ಚುಕಟ್ಟು ವ್ಯಾಪ್ತಿಯಡಿಯ ಹಲವು ಕೆರೆಗಳನ್ನು ವಿತರಣಾ ಕಾಲುವೆ ಜಾಲಗಳ ಮುಖಾಂತರ ತುಂಬಿಸಲು ಕ್ರಮ ಜುರುಗಿಸಲಾಗಿದೆ. |
| 2 | ಚಿಮ್ಮಲಗಿ ಏತ ನೀರಾವರಿ ಯೋಜನೆ | • ಮುಖ್ಯ ಸ್ಥಾವರದ ನಿರ್ಮಾಣ ಹಾಗೂ 110 ಕೆ.ವಿ. ಪವರ್ ಲೈನ್ ಕಾಮಗಾರಿ ಪೂರ್ಣಗೊಂಡಿದೆ.<br>• ಸಂಯುಕ್ತ ಕಾಲುವೆ ಮತ್ತು ಪಶ್ಚಿಮ ಕಾಲುವೆ (ವಿತರಣಾ ಕಾಲುವೆಗಳು ಒಳಗೊಂಡಂತೆ) ಪೂರ್ಣಗೊಂಡಿದ್ದು ಕಾಲುವೆ ಜಾಲಡದಿ ಪ್ರಾಯೋಗಿಕವಾಗಿ ನೀರು ಹರಿಬಿಡಲಾಗಿದೆ.<br>• ಪೂರ್ವ ಕಾಲುವೆ ಕಿ.ಮೀ.0.00 ರಿಂದ 132.17 ರವರೆಗಿನ (ಡೋಣಿ ನದಿಗೆ ಕಿ.ಮೀ. 132.00 ರಲ್ಲಿ ಅಕ್ವಡಕ್ಟ್ ನಿರ್ಮಾಣ ಒಳಗೊಂಡು) ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತವೆ ಹಾಗೂ ಪೂರ್ಣಗೊಂಡ ಕಾಲುವೆ ಜಾಲದಡಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.<br>• ದೋಣಿ ನದಿ ನಂತರದ ಯೋಜನೆಯ ಕೋರವಾರ ಶಾಖಾ ಕಾಲುವೆ (45.16 ಕಿ.ಮೀ.) ಮತ್ತು ನಾಗಠಾಣ ಶಾಖಾ ಕಾಲುವೆ (90.00 ಕಿ.ಮೀ). ರವರೆಗಿನ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿರುತ್ತದೆ.<br>• ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಡಿ ಬರುವ ಹಲವು ಕೆರೆಗಳನ್ನು ತುಂಬಿಸುವ ವಿತರಣಾ ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. |

| ಕ್ರ ಸ. | ಯೋಜನೆಯ ಹೆಸರು | ಯೋಜನಾ ಕಾಮಗಾರಿಯ ಭೌತಿಕ ಪ್ರಗತಿಯ ಪ್ರಸ್ತುತ ಹಂತ |
|---|---|---|
| 3 | ಇಂಡಿ ಏತ ನೀರಾವರಿ ಯೋಜನೆ | • ಮುಖ್ಯ ಕಾಲುವೆ ವಿಸ್ತರಣೆ ಕಿ.ಮೀ. 97.30 ರಿಂದ 147.00 ರವರೆಗಿನ ಹಾಗೂ ವಿತರಣಾ ಕಾಲುವೆ ಸಂ.41 ರಿಂದ 58 ರವರೆಗಿನ ಕಾಮಗಾರಿಗಳು ಪೂರ್ಣಗೊಂಡಿದ್ದು ಕಿ.ಮೀ.128ರ ವರೆಗಿನ ಪೂರ್ಣಗೊಂಡ ಕಾಲುವೆ ಜಾಲದಡಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.<br>• ಟೇಲ್ ಎಂಡ್ ವಿತರಣಾ ಕಾಲುವೆ 59ರ ಹಾಗೂ ಇದರ ವಿಸ್ತರಣೆಯ ಕಾಮಗಾರಿಗಳು ಮುಂದುವರೆದ ಪ್ರಗತಿಯಲ್ಲಿರುತ್ತದೆ. |
| 4 | ರಾಂಪೂರ ಏತ ನೀರಾವರಿ ಯೋಜನೆ | • ಪೂರ್ವ ಮುಖ್ಯ ಕಾಲುವೆ ವಿಸ್ತರಣೆ ಕಿ.ಮೀ. 20.00 ರಿಂದ 27.00 ಹಾಗೂ ವಿತರಣಾ ಕಾಲುವೆ ಸಂ.10, 11 ಮತ್ತು 12 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಪೂರ್ಣಗೊಂಡ ಕಾಲುವೆ ಜಾಲದಡಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.<br>• ಟೇಲ್ ಎಂಡ್ ವಿತರಣಾ ಕಾಲುವೆ ಕಿ.ಮೀ. 0.00 ರಿಂದ 35.00 ರವರೆಗಿನ (2 ಪ್ಯಾಕೇಜ್) ಕಾಮಗಾರಿಗಳು ಪೂರ್ಣಗೊಂಡಿದ್ದು, ಹಟ್ಟಿ ಚಿನ್ನದ ಗಣಿ ಬಳಿ ಕಿ.ಮೀ.17.56 ರಿಂದ 21.94 ವರೆಗಿನ ರಿಚ್‌ನಲ್ಲಿ ಅಕ್ವಿಡಕ್ಟ ಕಾಮಗಾರಿ ಪ್ರಗತಿಯಲ್ಲಿದೆ. |
| 5 | ಕೊಪ್ಪಳ ಏತ ನೀರಾವರಿ ಯೋಜನೆ | • ಸರ್ಕಾರವು ಕೊಪ್ಪಳ ಏತ ನೀರಾವರಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಲು ಅನುಮೋದನೆ ನೀಡಿರುತ್ತದೆ.<br>• ಯೋಜನೆಯ 1ನೇ & 2ನೇ ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರಗಳ ಕಾಮಗಾರಿ ಪೂರ್ಣಗೊಂಡಿದೆ ಹಾಗೂ 220 ಕೆ.ವಿ ಪವರ್ ಲೈನ್ & ಟರ್ಮಿನಲ್ ಬೇ ಕಾಮಗಾರಿ ಪ್ರಗತಿಯಲ್ಲಿವೆ.<br>• ಯೋಜನೆಯಡಿ ಯೋಜಿತ 1.12 ಲಕ್ಷ ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರದಡಿ ಹನಿ ನೀರಾವರಿ ಪದ್ಧತಿ ಅಳವಡಿಕೆಗಾಗಿ ವಿವರವಾದ ಸರ್ವೇಕ್ಷಣ, ವಿನ್ಯಾಸ ಹಾಗೂ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಶೀಘ್ರದಲ್ಲಿಯೇ ಯೋಜನೆಯಡಿ ಪೈಪಲೈನ್ ಅಳವಡಿಕೆಯ ಜಾಲಗಳಿಂದ ಹಲವು ಕೆರೆಗಳನ್ನು ತುಂಬಿಸುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 6 | ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ | • ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಿ.ಮೀ. 95.00 ರಿಂದ 130.00 ರವರೆಗಿನ ಕಾಮಗಾರಿ ಪೂರ್ಣಗೊಂಡಿದ್ದು ಮುಖ್ಯ ಕಾಲುವೆ ಕಿ.ಮೀ. 130.00 ರಿಂದ 168.00 ರವರೆಗಿನ (ಬೃಹತ್ ಅಕ್ವಡಕ್ಟ್ ನಿರ್ಮಾಣ ಒಳಗೊಂಡು) ಹಾಗೂ ಟೇಲ್ ಎಂಡ್ ವಿತರಣಾ ಕಾಲುವೆ (18.60 ಕಿ.ಮೀ.) ಕಾಮಗಾರಿಗಳು ಮುಂದುವರೆದ ಪ್ರಗತಿಯಲ್ಲಿವೆ.<br>• ನಾ.ಬ.ದಂ.ಕಾ ವಿತರಣಾ ಕಾಲುವೆ ಸಂ.23, 36 & 38ರ ಜಾಲದಡಿಯ ಕಾಮಗಾರಿಗಳು ಸಹ ಪ್ರಗತಿಯಲ್ಲಿವೆ. |
| 7 | ಮಲ್ಲಾಬಾದ ಏತ ನೀರಾವರಿ ಯೋಜನೆ | • ಯೋಜನೆಯಡಿಯ 3 ಟರ್ನ್ ಕೀ ಆಧಾರದ ಮುಖ್ಯ ಸ್ಥಾವರ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಪ್ರಾಯೋಗಿಕ ಕಾರ್ಯಾರಂಭ ಮಾಡಲಾಗಿದೆ.<br>• ಯೋಜನೆಯ 3 ಮುಖ್ಯ ಸ್ಥಾವರಗಳಡಿಯ ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದ್ದು, ಪೂರ್ಣಗೊಂಡ ಕಾಲುವೆ ಜಾಲಗಳಡಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. |

| ಕ್ರ ಸ. | ಯೋಜನೆಯ ಹೆಸರು | ಯೋಜನಾ ಕಾಮಗಾರಿಯ ಭೌತಿಕ ಪ್ರಗತಿಯ ಪ್ರಸ್ತುತ ಹಂತ |
|---|---|---|
| 8 | ಹೆರಕಲ್ ಏತ ನೀರಾವರಿ ಯೋಜನೆ | • ಯೋಜನೆಯಡಿ ಘಟಪ್ರಭಾ ನದಿಗೆ ಅಡ್ಡಲಾಗಿ ಹೇರಕಲ್ ಬ್ರಿಡ್ಜ್-ಕಂ-ಬ್ಯಾರೇಜ್ ಕಾಮಗಾರಿ ಪೂಣಗೊಂಡಿದೆ.<br>• ಹೆರಕಲ್ (ದಕ್ಷಿಣ) ಮತ್ತು ಹೇರಕಲ್ (ಉತ್ತರ) ಏತ ನೀರಾವರಿ ಟರ್ನ ಕೀ ಆಧಾರಿತ, ಮುಖ್ಯ ಸ್ಥಾವರದ ಕಾಮಗಾರಿಗಳು ಪೂರ್ಣಗೊಂಡಿದ್ದು ಪ್ರಾಯೋಗಿಕ ಕಾರ್ಯರಂಭ ಮಾಡಲಾಗಿದೆ.<br>• ಹೆರಕಲ್ (ದಕ್ಷಿಣ) ಮತ್ತು ಹೇರಕಲ್ (ಉತ್ತರ) ಏತ ನೀರಾವರಿ ವ್ಯಾಪ್ತಿಯಡಿಯ ಕಾಲುವೆ ಜಾಲದ ನಿರ್ಮಾಣದ ಕಾಮಗಾರಿಗಳು ಪ್ರಗತಿ ವಿವಿಧ ಹಂತದಲ್ಲಿವೆ. |
| 9 | ಭೀಮಾ ಫ್ಲ್ಯಾಂಕ್ | • ಯೋಜನೆಯಡಿ ಶಹಾಪುರ ಶಾಖಾ ಮುಖ್ಯ ಕಾಲುವೆ ವಿಸ್ತರಣೆ ಕಿ.ಮೀ.75.30 ರಿಂದ 96.50 ಪ್ಯಾಕೇಜ್ ಕಾಮಗಾರಿ ಪ್ರಗತಿಯಲ್ಲಿದೆ. |

## 2. ಕೃ.ಮೇ.ಯೋ. ಹಂತ-3ರಡಿ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ :

1) ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್.524.256 ಮೀ.ಗೆ ಹೆಚ್ಚಿಸುವುದರಿಂದ ಹಿನ್ನೀರಿನಲ್ಲಿಯ ಜಮೀನುಗಳ ಭೂಸ್ವಾಧೀನತೆ ಹಾಗೂ ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್ ವಸತಿ, ಬಾಗಲಕೋಟ ಪಟ್ಟಣ ಪುನರವಸತಿಗಾಗಿ ಹಾಗೂ 9 ಉಪ ಯೋಜನೆಗಳಡಿಯ ಕಾಲುವೆ ಜಾಲದ ನಿರ್ಮಾಣಕ್ಕಾಗಿ ಒಟ್ಟಾರೆ 1.34 ಲಕ್ಷ ಎಕರೆ ಜಮೀನನ್ನು "ನ್ಯಾಯಬದ್ಧ ಮತ್ತು ಪಾರದರ್ಶಕ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013" ರನ್ವಯ ಭೂಸ್ವಾಧೀನಗೊಳಿಸುವುದಾಗಿರುತ್ತದೆ. ಇದುವರೆಗೂ ಒಟ್ಟು 18,039 ಎಕರೆ ಜಮೀನು ಭೂಸ್ವಾಧೀನತೆಗೆ ಅವಾರ್ಡ ಮಾಡಲಾಗಿದೆ.

2) ಪ್ರಸ್ತುತ ಸರ್ಕಾರವು ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ಭೂಪರಿಹಾರ ದರ ನಿಗಡಿಪಡಿಸಲು ಮಾನ್ಯ ಉಪ ಮುಖ್ಯಮಂತ್ರಿಗಳು ಇವರ ಅಧ್ಯಕ್ಷತೆಯಲ್ಲಿ 'ಸಚಿವ ಸಂಪುಟದ ಉಪಸಮಿತಿ' ರಚಿಸಿದ್ದು ಸಮಿತಿಯು ಈಗಾಗಲೇ ದಿ:20.02.2019 ಹಾಗೂ ದಿ:03.07.2019 ರಂದು ಕ್ರಮವಾಗಿ 1ನೇ ಹಾಗೂ 2ನೇ ಸಭೆಗಳನ್ನು ಜರುಗಿಸಿದ್ದು ಏಕ ರೂಪ ಭೂ ಪರಿಹಾರ ಒದಗಿಸುವ ನಿರ್ಣಯದ ಕುರಿತು ಪರಿಶೀಲನೆಯಲ್ಲಿರುತ್ತದೆ.

3) ಬಾಗಲಕೋಟ ಪಟ್ಟಣದಲ್ಲಿ ಆರ್.ಎಲ್. 521.00 ರಿಂದ 523.00 ಮೀ.ವರೆಗೆ ಬರುವ ಸಂತ್ರಸ್ಥರನ್ನು ನವನಗರದಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ ಯೂನಿಟ್-2ರಲ್ಲಿ ಸ್ಥಳಾಂತರಗೊಳಿಸಲು ಈಗಾಗಲೇ ಕೈಗೊಂಡಿರುವ ಮೂಲಭೂತ ಸೌಕರ್ಯ ಕಾಮಗಾರಿಗಳಾದ ಒಳಚರಂಡಿ, ನೀರು ಸರಬರಾಜು, ಮಳೆ ನೀರು ಚರಂಡಿ, ವಿದ್ಯುದ್ದೀಕರಣ ಕಾಮಗಾಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತವೆ. ರಸ್ತೆ ನಿರ್ಮಾಣದ ಕಾಮಗಾರಿ ಪ್ರಗತಿಯಲ್ಲಿದೆ.

******